# ನಗರಸಭಾ ಕಾರ್ಯಾಲಯ ಶಿವಮೊಗ್ಗ.

ಕ್ರಮಾಂಕ : ಕಾವಿ: ಡಿ.ಎಂ.ಸಿಆರ್ : / 2009-10 ದಿನಾಂಕ :27-08-2009

## ಟೆಂಡರ್ ಪ್ರಕಟಣೆ

2009-10 ಮತ್ತು 2010-11ನೇ ಸಾಲಿಗೆ ಬಿಡುಗಡೆಯಾದ ರೂ.30 ಕೋಟಿಯ ಮಾನ್ಯ ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ (CMSMTDP) ದಡಿಯಲ್ಲಿನ ನಗರಸಭಾ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 2000ರ ಪ್ರಕಾರ ಆ್ಯಕ್ಟ್ 2000 ನಿಯಮದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಗುತ್ತಿಗೆದಾರರಿಂದ ಈ ಕೆಳಕಂಡ ಕೆಲಸಗಳಿಗೆ ನಿಗದಿತ ನಮೂನೆಯಲ್ಲಿ ಮೊಹರಾದ ಲಕೋಟೆಯಲ್ಲಿ ಮೇಲೆ ಕೆಲಸದ ಹೆಸರುಗಳನ್ನು ಬರೆದಿರುವ ಐಟಂವಾರು ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ **ಕ್ರ.ಸಂ. 3,4,5,ಒಂದು ಲಕೋಟೆ ಪದ್ಧತಿಯಲ್ಲಿ** ಮತ್ತು **ಕ್ರ.ಸಂ. 1,2,6,7,8 ಎರಡು ಲಕೋಟೆ ಪದ್ಧತಿಯಲ್ಲಿ** ಆಹ್ವಾನಿಸಲಾಗಿದೆ. ಅವುಗಳನ್ನು ಈ ಕೆಳಗೆ ಸೂಚಿಸಿರುವ ದಿನಾಂಕಗಳಂದು ಸಾಯಂಕಾಲ 4-30 ಗಂಟೆಗೆ ಸ್ವೀಕರಿಸಲಾಗುವುದು. ಸಾಧ್ಯವಾದಲ್ಲಿ ಅದೇ ದಿನ ಸಾಯಂಕಾಲ 5-00 ಗಂಟೆಗೆ ಅಥವಾ ಇತರೆ ಅನುಕಾಲವಾದ ದಿನ ಟೆಂಡರ್‌ದಾರರು ಅಥವಾ ಅವರ ಏಜೆಂಟರುಗಳ ಸಮ್ಮುಖದಲ್ಲಿ ತೆರೆಯಲಾಗುವುದು. ಸಾರ್ವಜನಿಕ ರಜೆಯಾದರೆ ಮಾರನೇ ದಿನವೇ ಈ ದಿನಾಂಕದ ಬದಲು ಅನ್ವಯಿಸುತ್ತದೆ ಎಂದು ತಿಳಿಯತಕ್ಕದ್ದು. ಯಾವುದೇ ಅಥವಾ ಟೆಂಡರ್‌ಗಳನ್ನು ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಟೆಂಡರ್ ಫಾರಂಗಳನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಈ ಕೆಳಗೆ ನಮೂದಿಸಲಾದ ದಿನಾಂಕಗಳಲ್ಲಿ ನಿಗದಿತ ಟೆಂಡರ್ ಫಾರಂಗಳ ಬೆಲೆಯನ್ನು ನೀಡಿ ಪಡೆಯಬಹುದು ಹಾಗೂ ಫಾರಂ ಬೆಲೆಯನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

1 ಟೆಂಡರ್ ಫಾರಂಗಳಿಗೆ ನಗರಸಭೆ ರಶೀದಿಯೊಂದಿಗೆ ಅರ್ಜಿಸಲ್ಲಿಸುವ ಹಾಗೂ ನಗರಸಭೆಯಿಂದ ಖಾಲಿ ಟೆಂಡರ್ ಪಾರಂಗಳನ್ನು ನೀಡುವ ದಿನಾಂಕ: 01-09-2009 ರಿಂದ 26-09-2009ರವರೆಗೆ.(ಸಂಜೆ 5ರ ವರೆಗೆ)

2 ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು (ಡಬ್ಬಿಗೆ) ಸ್ವೀಕರಿಸುವ ದಿನಾಂಕ 29-09-2009.(ಸಂಜೆ 4ರ ವರೆಗೆ)

3 ಟೆಂಡರ್ ತೆರೆಯುವ ದಿನಾಂಕ:29-09-2009. (ಸಂಜೆ 5.30ಕ್ಕೆ)

4 ಕಾಮಗಾರಿಯ ಪೂರೈಸುವ ಅವಧಿ : 4 ತಿಂಗಳು ಮತ್ತು ಕ್ರಮ ಸಂಖ್ಯೆ 7,8 ಕ್ಕೆ 9 ತಿಂಗಳು

| ಕ್ರ ಸಂಖ್ಯ | ಕಾಮಗಾರಿಯ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ (ರೂ.ಲಕ್ಷಗಳಲ್ಲಿ) | ಫಾರಂ ಶುಲ್ಕ (ತೆರಿಗೆ ಸೇರಿ) |
|---|---|---|---|---|
| 1 | ಹೊಳೆಹೊನ್ನೂರು ರಸ್ತೆಯಿಂದ ಶಾಂತಮ್ಮ ಲೇಔಟ್‌ವರೆಗೆ ಮಳೆ ನೀರು ಕಾಲುವೆ ಹಾಗೂ ಸೇತುವೆ ನಿರ್ಮಾಣ | 60.00 | 1.20 | 6000 |
| 2 | ಆರ್.ಎಂ.ಎಲ್.ನಗರದಿಂದ ಎನ್.ಟಿ.ರಸ್ತೆಯವರೆಗೆ ಮಳೆ ನೀರು ಕಾಲುವೆ ಹಾಗೂ ಕಲ್ವರ್ಟ್ ನಿರ್ಮಾಣ | 84.00 | 1.68 | 9000 |
| 3 | ವಿದ್ಯಾನಗರದಿಂದ ರಾಜೀವ್ ಗಾಂಧಿ ಬಡಾವಣೆ ಮೂಲಕ ತುಂಗಾ ನದಿಯವರೆಗೆ ಮಳೆ ನೀರು ಕಾಲುವೆ ನಿರ್ಮಾಣ | 40.00 | 0.80 | 4000 |
| 4 | ಅಶೋಕ ನಗರದಲ್ಲಿ ಮುಖ್ಯ ಮಳೆ ನೀರು ಕಾಲುವೆ ಅಭಿವೃದ್ಧಿ ಪಡಿಸುವುದು | 26.00 | 0.52 | 3000 |
| 5 | ಆರ್.ಎಂ.ಎಲ್. ನಗರದಲ್ಲಿನ ಭಾರತ್ ಫೌಂಡ್ರಿ ಹತ್ತಿರದ ಮಳೆ ನೀರು ಚರಂಡಿ ಅಭಿವೃದ್ಧಿ | 30.00 | 0.60 | 3000 |
| 6 | ಮೈಕ್ರೋವೇವ್ ಸ್ಟೇಷನ್ ರಸ್ತೆಯಿಂದ ಎ.ಪಿ.ಎಂ.ಸಿ.ಹತ್ತಿರದ 100 ಅಡಿ ರಸ್ತೆವರೆಗೆ 60 ಅಡಿ ರಸ್ತೆ ಅಭಿವೃದ್ಧಿ | 60.00 | 1.20 | 6000 |

| | | | | |
|---|---|---|---|---|
| 7 | ನವುಲೆ ತ್ರಿಮೂರ್ತಿ ನಗರದಿಂದ ಶಾಂತಿ ನಗರದ (ರಾಗಿಗುಡ್ಡ) ಮೂಲಕ ಹೊನ್ನಾಳಿ (ಹೆಚ್.ಎಂ) ರಸ್ತೆಯವರೆಗೆ ರಸ್ತೆ ಅಭಿವೃದ್ಧಿ ಪಡಿಸುವುದು | 100.00 | 2.00 | 10000 |
| 8 | ಬೊಮ್ಮನಕಟ್ಟೆಯ ಆಶ್ರಯ ಬಡಾವಣೆಯ ಪ್ರಧಾನ ರಸ್ತೆ ಅಭಿವೃದಿ, ಚರಂಡಿ ಹಾಗೂ ಕಲ್ವರ್ಟ್ ನಿರ್ಮಾಣ | 175.00 | 3.50 | 20000 |

## ಷರತ್ತುಗಳು

1 ಅರ್ಜಿದಾರರು ಟೆಂಡರ್ ಕರೆದ ಕಾಮಗಾರಿಯಂತಹ ಕಾಮಗಾರಿಗಳನ್ನು ದಕ್ಷತೆಯಿಂದ ನಿರ್ವಹಿಸಿದ ಅನುಭವ ಇರಬೇಕು. ಸರ್ಕಾರಿ ಆದೇಶ ಸಂಖ್ಯೆ ಪಿ.ಡಬ್ಲ್ಯೂ.ಡಿ 344 ಸಿ.ಆರ್.ಎಂ.2000 ದಿನಾಂಕ 15-01-2002ರ ಪ್ರಕಾರ ಈ ಕಾಮಗಾರಿಗಳಿಗೆ ನಿರ್ದಿಷ್ಟ ಪಡಿಸಿದ ಮೊತ್ತದ ಶೇಕಡ 50ರಷ್ಟು ಮೊತ್ತದ ಸಮನಾದ ಕಾಮಗಾರಿಯನ್ನು ಅರ್ಜಿದಾರರು ಹಿಂದಿನ ಐದು ಆರ್ಥಿಕ ವರ್ಷಗಳ ಬ್ಲಾಕ್ ಕಾಲಾವಧಿಯ ಯಾವುದೇ ಒಂದು ಆರ್ಥಿಕ ವರ್ಷದಲ್ಲಿ ತೃಪ್ತಿಕರವಾಗಿ ಪೂರೈಸಿರಬೇಕು. ಇದಕ್ಕೆ ಸಂಬಂಧಿಸಿದಂತೆ ಸಕ್ಷಮ ಅಧಿಕಾರಿಗಳಿಂದ ದೃಡೀಕರಣ ಪತ್ರವನ್ನು ಒದಗಿಸತಕ್ಕದ್ದು.

2 ಕ್ರ. ಸಂ 6,7,8ರ ಕಾಮಗಾರಿಗಳಿಗೆ ಭಾಗವಹಿಸಿದ ಗುತ್ತಿಗೆದಾರರು ಕೆಲಸಕ್ಕೆ ಅವಶ್ಯಕವಾದ 40/60 ಟಿ.ಪಿ.ಹೆಚ್. ಸಾಮರ್ಥ್ಯದ ಒಂದು ಹಾಟ್ ಮಿಕ್ಸ್ ಪ್ಲಾಂಟ್, 1 ಪೇವರ್, 2 ರೋಲರ್, 4 ಟಿಪ್ಪರ್, 1 ಮೆಕ್ಯಾನಿಕಲ್ ಸ್ಪ್ರೇಯರ್, 2 ಕಾಂಕ್ರೀಟ್ ಮಿಕ್ಸರ್, 2 ಪಿನ್ ವೈಬ್ರೇಟರ್ ಹಾಗೂ ಇತರೆ ಅವಶ್ಯಕವಾದ ವಸ್ತುಗಳ ಮಾಲೀಕತ್ವ ಹೊಂದಿರಬೇಕು. ಮತ್ತು ಹಾಟ್ ಮಿಕ್ಸ್ ಪ್ಲಾಂಟ್ ಹಾಗೂ ಪೇವರ್ ಇಲ್ಲದೇ ಇರುವವರು ಇವುಗಳ ಮಾಲೀಕತ್ವ ಹೊಂದಿರುವವರಿಂದ ಸದರಿ ಕೆಲಸಕ್ಕೆ ಉಪಯೋಗಿಸಲು ಸಂಬಂಧ ಪಟ್ಟ ಮಾಲೀಕರಿಂದ ಒಪ್ಪಿಗೆ ಪತ್ರ ಪಡೆಯತಕ್ಕದ್ದು. ಸ್ಥಾವರ ಹೊಂದಿರುವ ಬಗ್ಗೆ ದೃಢೀಕರಣ ಪತ್ರ ನೀಡಬೇಕು. ಹಾಗೂ ಪ್ಲಾಂಟ್ ಮತ್ತು ಪೇವರ್‌ನ್ನು ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು. ಎಲ್ಲಾ ಯಂತ್ರೋಪಕರಣಗಳು ಮತ್ತು ಸಲಕರಣೆಗಳನ್ನು ಹೊಂದಿರುವ ಬಗ್ಗೆ ನೋಟರಿಯವರ ಮುಂದೆ ಪ್ರಮಾಣೀಕರಿಸದ ಪತ್ರಗಳೊಂದಿಗೆ ಹಾಗೂ ಆದಾಯ ತೆರಿಗೆ, ವಾಣಿಜ್ಯ ತೆರಿಗೆ ಸಂದಾಯದ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದು.

3 ಗುತ್ತಿಗೆದಾರರು ಈ ಹಿಂದೆ ಯಾವುದೇ ಕೆಲಸಗಳನ್ನು ಪೂರ್ಣಗೊಳಸದೇ ಮಧ್ಯದಲ್ಲಿ ತೊರೆದಿರಬಾರದು. ಹಾಗೂ ಸಕಾರಣವಿಲ್ಲದೇ ಯಾವುದೇ ಕಾಮಗಾರಿಗಳನ್ನು ವಿಳಂಬವಾಗಿ ಪೂರೈಸಿರಬಾರದು.

4 ಅರ್ಜಿದಾರರು ತಮ್ಮ ಗುತ್ತಿಗೆ ನೊಂದಾವಣಿ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.

5 ಗುತ್ತಿದಾರರು ಭಾಗವಹಿಸುವ ಕಾಮಗಾರಿಯ ಅಂದಾಜು ಮೊತ್ತದ ಶೇ 30 ರಷ್ಟು ಮೌಲ್ಯಕ್ಕೆ ರಾಷ್ಟ್ರೀಕೃತ ಬಾಂಕ್ ಗಳಿಂದ ಸಾಲ ಪಡೆಯುವ ಸಾಮಾರ್ಥ್ಯದ ಬಗ್ಗೆ (ಲೈನ್ ಆಫ್ ಕ್ರೆಡಿಟ್) ದೃಡೀಕರಣ ಪತ್ರ ಲಗತ್ತಿಸತಕ್ಕದ್ದು.

6 ಟೆಂಡರ್ ಫಾರಂಗಳನ್ನು ಈ ಕಛೇರಿಯಿಂದ ತೆಗೆದುಕೊಂಡು ಹೋಗುವಾಗ ತಮ್ಮ ರಿಜಿಸ್ಟ್ರೇಷನ್ ಪಾಸ್ ಬುಕ್‌ನ್ನು ಒದಗಿಸಿ ಕೆಲಸದ ವಿವರಗಳನ್ನು ದಾಖಲಿಸಿಕೊಳ್ಳತಕ್ಕದ್ದು.

7 ಕಾರ್ಯದೇಶ ಪಡೆಯುವ ಮುನ್ನ ಬಿಡ್ ಮೊತ್ತದ ಮೇಲೆ ಶೇ5% ರಷ್ಟು ಎಫ್.ಎಸ್.ಡಿ.ಹಣವನ್ನು ಡಿ.ಡಿ.ಮುಖಾಂತರ ಅಥವಾ ಬ್ಯಾಂಕ್ ಗ್ಯಾರಂಟಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದು ಸಲ್ಲಿಸತಕ್ಕದ್ದು. (ಕರ್ನಾಟಕ ಟೆಂಡರ್ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಏಫ-2 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟಿರುತ್ತದೆ.)

8 ಟೆಂಡರ್ ಸಲ್ಲಿಸುವಾಗ ಅನುಸೂಚಿ ದರಕ್ಕಿಂತ ಕಡಿಮೆ ದರ ಸಲ್ಲಿಸದಲ್ಲಿ ವ್ಯೆತ್ಯಾಸ ಮೊಬಗಲನ್ನು ಡಿ.ಡಿ. ಯೊಂದಿಗೆ ಟೆಂಡರ್ ಜೊತೆಯಲ್ಲಿ ಲಗತ್ತಿಸತಕ್ಕದ್ದು ತಪ್ಪಿದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು

9 ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಆದೇಶದನ್ವಯ ಪೂರ್ಣಗೊಂಡ ಕಾಮಗಾರಿಯ ದಿನಾಂಕದಿಂದ ಮುಂದುವರಿದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದವರೆಗೆ ಗುತ್ತಿಗೆದಾರರು ಕಾಯ್ದುಕೊಳ್ಳುವ ಜವಬ್ದಾರಿ ಇರುತ್ತದೆ. ನಂತರ ಬದ್ರತಾ ಠೇವಣಿಯನ್ನು ಹಿಂದಿರುಗಿಸಲಾಗುವುದು.

10 ಗುತ್ತಿಗೆದಾರರು ಮಾಡಿದ ಕಾಮಗಾರಿಯನ್ನು ಎಲ್ಲಾ ರೀತಿಯಿಂದ ಪೂರ್ಣಗೊಳಿಸಿ ಸದರಿ ಕಾಮಗಾರಿಯನ್ನು ತೃಪ್ತಿಕರವಾಗಿ ನಿರ್ವಹಿಸದ ಬಗ್ಗೆ ಪರೀಕ್ಷಿಸಿದ ವರದಿ ಬಂದ ನಂತರ ಕಾಮಗಾರಿಯನ್ನು ಹಸ್ತಾಂತರಿಸಿ ಕೊಳ್ಳಲಾಗುವುದು.

**ಕ್ರ.ಸಂ. 1,2,6,7 ಮತ್ತು 8 ರ ಕಾಮಗಾರಿಗಳಿಗೆ ಮಾತ್ರ ಅನ್ವಯಿಸುತ್ತದೆ. (ಹೆಚ್ಚುವರಿಯಾಗಿ)**

1 .ಸದರಿ ಕಾಮಗಾರಿಗಳು ಎರಡು ಲಕೋಟೆಗಳನ್ನು ಹೊಂದಿದ್ದು ಲಕೋಟೆ-ಎ ಟೆಕ್ನಿಕಲ್ ಬಿಡ್, ಲಕೋಟೆ-ಬಿ ಫೈನಾನ್ಸಿಯಲ್ ಬಿಡ್‌ಗಳನ್ನು ಹೊಂದಿರುತ್ತದೆ. ಟೆಂಡರ್‌ದಾರರು ಟೆಂಡರ್‌ಗಳನ್ನು ಎರಡು ಪ್ರತ್ಯೇಕ ಲಕೋಟೆಗಳಲ್ಲಿ, ಮೊಹರಾದ ಲಕೋಟೆಯ ಮೇಲೆ ಲಕೋಟೆ –ಎ ಟೆಕ್ನಿಕಲ್ ಬಿಡ್, ಲಕೋಟೆ –ಬಿ ಫೈನಾನ್ಸಿಯಲ್ ಬಿಡ್ ಎಂದು ನಮೂದಿಸಿ ಪ್ರತ್ಯೇಕವಾದ ಎರಡು ಲಕೋಟೆಗಳನ್ನು ಮತ್ತೊಂದು ಲಕೋಟೆಯಲ್ಲಿ ಹಾಕಿ ಟೆಕ್ನಿಕಲ್ ಬಿಡ್ ಮತ್ತು ಫೈನಾನ್ಸಿಯಲ್ ಬಿಡ್ ಎಂದು ನಮೂದಿಸಿ ಟೆಂಡರ್ ಸಲ್ಲಿಸತಕ್ಕದ್ದು.

2 **ಲಕೋಟೆ –ಎ:** ಟೆಕ್ನಿಕಲ್ ಬಿಡ್ ದ್ವಿಪ್ರತಿ ಗಳಲ್ಲಿ ಗುತ್ತಿಗೆದಾರರ ಬಳಇರುವ ತಾಂತ್ರಿಕ ಮಾಹಿತಿಗಳನ್ನು ಹೊಂದಿದ್ದು ಅವುಗಳಿಗೆ ವಿವರಗಳನ್ನು ನಿಗದಿತ ರೀತಿಯಲ್ಲಿ ಸಲ್ಲಿಸಬೇಕು. ಹಾಗೂ ಕಾಮಗಾರಿಗಳಿಗೆ ಅವಶ್ಯಕವಾದ ಮೊತ್ತದ ಇ.ಎಂ.ಡಿ.ಯನ್ನು ನಿಗಧಿತ ರೀತಿಯಲ್ಲಿ ಪೌರಾಯುಕ್ತರು ನಗರಸಭೆ, ಶಿವಮೊಗ್ಗ ರವರ ಕೃಪೆಯಲ್ಲಿ ಒತ್ತೆಯಾಗಿಡಬೇಕು.

3 **ಲಕೋಟೆ –ಬಿ:** ಫೈನಾನಿಯಲ್ ಬಿಡ್ ಟೆಂಡರ್ ಷೆಡ್ಯೂಲ್‌ನ್ನು ದ್ವಿಪ್ರತಿಯಲ್ಲಿ ಹೊಂದಿದ್ದು ಪ್ರತಿ ಐಟಂಗಳಿಗೆ ದರವನ್ನು ಅಂಕೆಯಲ್ಲಿ ಮತ್ತು ಅಕ್ಷರಗಳಲ್ಲಿ ಸಲ್ಲಿಸಬೇಕು.

4 **ಲಕೋಟೆ –ಎ** ಟೆಕ್ನಿಕಲ್ ಬಿಡ್ ಮೊದಲು ತೆರೆಯಲಾಗುವುದು. ಹಾಗು ಗುತ್ತಿಗೆದಾರರು ಇದರಲ್ಲಿ ಒದಗಿಸಿರುವ ವಿವರಗಳನ್ನು ಪರಿಶೀಲಿಸಲಾಗುವುದು. ಇದರಲ್ಲಿ ಅರ್ಹತೆ ಪಡೆಯುವ ಗುತ್ತಿಗೆದಾರರ ಲಕೋಟೆ –ಬಿ ಫೈನಾನ್ಸಿಯಲ್ ಬಿಡ್‌ನ್ನು ತೆರೆಯಲಾಗುವುದು. ಈ ವಿಷಯದಲ್ಲಿ ಸಕ್ಷಮ ಅಧಿಕಾರಿಗಳ ನಿರ್ದಾರವು ಅಂತಿಮವಾಗಿರುತ್ತದೆ.

5 ಟೆಂಡರ್‌ದಾರರು ವ್ಯಾಟ್ ನೊಂದಾಯಿಸಿದ ಪ್ರತಿ ಹಾಗೂ ಕಳೆದ ಸಾಲಿನವರೆಗೆ ವಾಣಿಜ್ಯ ತೆರಿಗೆ ಪಾವತಿಸಿರುವ ಬಗ್ಗೆ ತೀರುವಳಿ ಪತ್ರ ಹಾಗುಟೆಂಡರ್ ಪುಸ್ತಕದಲ್ಲಿ ನಮೂದಿಸಿದ ಫೈನಾನ್ಸಿಯಲ್ ಟರ್ನ್ ಓವರ್ ಹೊಂದಿರಬೇಕು.

6 ಟೆಂಡರ್ ಸಲ್ಲಿಸುವವರು ಟೆಂಡರ್ ನಲ್ಲಿನ ಅಗತ್ಯ ನಿಭಂದನೆಗಳನ್ನು ಪೂರೈಸಲು ಬೇಕಾದ ಲಗತ್ತುಗಳನ್ನು ಟೆಂಡರ್ ಪುಸ್ತಕದೊಂದಿಗೆ ಲಗತ್ತಿಸುವುದು.

7 ಹೆಚ್ಚಿನ ವಿವರಗಳು ಬೇಕಾದಲ್ಲಿ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

(ಶ್ರೀ.ಎನ್.ಜೆ.ರಾಜ ಶೇಖರ್)
ಅಧ್ಯಕ್ಷರು
ನಗರಸಭೆ, ಶಿವಮೊಗ್ಗ

(ಶ್ರೀ.ಬಿ.ಜಯಣ್ಣ)
ಪೌರಾಯುಕ್ತರು
ನಗರಸಭೆ, ಶಿವಮೊಗ್ಗ